ನಾದಿಗಳು ಮತ್ತೆ ಉತ್ತೇಜಿತರಾದರು. ಆದರೆ ಯುಧಿಷ್ಠಿರನು ಅವರನ್ನು ಶಾಂತಪಡಿಸುತ್ತಿದ್ದನು. ನಿರ್ಮಲಚಿತ್ತನೂ ದಯಾವಂತನೂ ಆದ ಆತನು ಎಂದಿಗೂ ಕೌರವರಿಗೆ ಅಹಿತವನ್ನು ಚಿಂತಿಸಿದವನಲ್ಲ. ಆದ್ದರಿಂದ ಅವನು ತಾಯಿಯನ್ನೂ ಸೋದರರನ್ನೂ ಪರಿವಾರವನ್ನೂ ಒಡಗೊಂಡು ಮತ್ತೆ ದಕ್ಷಿಣದ ಕಡೆಗೆ ಹೋದನು. ಹೋಗುತ್ತ ವಿಂಧ್ಯವನ ಸೇರಿದನು. ಅಲ್ಲಿ ತನ್ನ ಆಶ್ರಮದಲ್ಲಿದ್ದುಕೊಂಡು ತಪದಲ್ಲಿ ತೊಡಗಿದ್ದ ವಿದುರನನ್ನು ನೋಡಿ ತಮ್ಮಂದಿರೊಡನೆ ಅವನಿಗೆ ವಂದಿಸಿ, ಸ್ತುತಿಸಿದನು. ''ಹೇ ಪೂಜ್ಯ, ನಿನ್ನ ಜನ್ಮವೇ ಸಫಲ. ಸಿರಿಸಂಪದಗಳನ್ನು ಬಿಟ್ಟು ಜಿನೋಕ್ತಮಾರ್ಗದಲ್ಲಿ ಮಹಾತಪಸ್ಸಿನಲ್ಲಿ ತೊಡಗಿದ್ದು ನಿರ್ಭೀತನಾಗಿದ್ದೀಯೆ. ಯಾವ ಮಾರ್ಗದಲ್ಲಿ ರತ್ನತ್ರಯಗಳು ಪ್ರತಿಪಾದಿತವಾಗಿದೆಯೋ, ವ್ರತ ಗುಪ್ತಿ ಮುಂತಾದುವು ನಿರೂಪಿತವಾಗಿವೆಯೋ ಅಂಥ ಮಾರ್ಗದಲ್ಲಿ ಸ್ಥಿರವಾಗಿರುವ ನಿನ್ನಂಥ ಮಹಾನುಭಾವರು ಶೀಘ್ರದಲ್ಲಿಯೇ ಸಿದ್ಧಪದವಿಯನ್ನು ಗಳಿಸುತ್ತಾರೆ'' ಎಂಬುದಾಗಿ ಜಿನೋಕ್ತಮಾರ್ಗವನ್ನೂ ಮಹಾಮುನಿ ವಿದುರನನ್ನೂ ಸ್ತುತಿಸಿ, ದ್ವಾರಿಕೆಗೆ ಹೋದನು.

ಪಾಂಡವರ ಬರವಿನ ಸುದ್ದಿ ತಿಳಿಯುತ್ತಲೂ ಯಾದವರು ಅವರನ್ನು ಅತಿಶಯವಾಗಿ ಸ್ವಾಗತಿಸಿದರು. ತಮ್ಮಂದಿರೊಡನೆ ಯುಧಿಷ್ಠಿರನು ದ್ವಾರಿಕೆಯನ್ನು ಹೊಕ್ಕನು. ಸಮುದ್ರವಿಜಯಾದಿಗಳಾದ ಸೋದರರು ಬಹಳ ಕಾಲವಾದ ಮೇಲೆ ತಮ್ಮ ತಂಗಿಯನ್ನೂ ಸೋದರಳಿಯಂದಿರನ್ನೂ ಕಂಡಿದ್ದರಾದ್ದರಿಂದ ಈ ಸಮಾಗಮದಿಂದ ಅವರಿಗೆ ಆನಂದವಾಯಿತು. ನೇಮಿನಾಥ ಕೃಷ್ಣ ಬಲದೇವ ಮುಂತಾದ ಸಮಸ್ತ ಯಾದವಕುಮಾರರೂ ಅಂತಃಪುರದವರೂ ಪ್ರಜೆಗಳೂ ಎಲ್ಲರೂ ಸಂತೋಷಿಸಿದರು. ಯಾದವರೂ ಪಾಂಡವರೂ ಪರಸ್ಪರವಾಗಿ ಕಲೆತು ನಲಿಯಲು ಹಾಗೆ ಅವಕಾಶವಾದ್ದು, ಶತ್ರುಗಳಿಂದ ಅಪಕಾರವಾಗಲಿಲ್ಲ, ಉಪಕಾರವೇ ಆಯಿತು ಎನ್ನುವಂತಾಯಿತು. ಆಮೇಲೆ ಕೃಷ್ಣನು ತೋರಿಸಿಕೊಟ್ಟ ಸರ್ವಭೋಗಪ್ರದಗಳಾದ ಐದು ಉತ್ತಮ ಪ್ರಾಸಾದಗಳಲ್ಲಿ ಪಾಂಡವರೈವರೂ ಬೇರೆ ಬೇರೆ ಸುಖವಾಗಿದ್ದುಕೊಂಡರು. ಯುಧಿಷ್ಠಿರನು ಲಕ್ಷ್ಮೀಮತಿ, ಭೀಮನು ಶೇಷವತಿ, ಅರ್ಜುನನು ಸುಭದ್ರೆ, ಸಹದೇವನು ವಿಜಯೆ, ನಕುಲನು ರತಿ—ಎಂಬ ಕನ್ಯೆಯರನ್ನು ವರಿಸಿದರು. ಅವರೊಡನೆ ಸುಖದಲ್ಲಿದ್ದರು.

ಗೌತಮಸ್ವಾಮಿ ಹೇಳುತ್ತಾನೆ : "ಹೇ ಶ್ರೇಣಿಕನೆ, ನಾನು ನಿನಗಾಗಿ ಸಂಕ್ಷೇಪದಿಂದ ಕುರುವೀರರ ಕಥೆ ಹೇಳಿದ್ದೇನೆ. ಈಗ ನಾನು ಪ್ರದ್ಯುಮ್ನನ ಚೇಷ್ಟಿತಗಳನ್ನು ಹೇಳುತ್ತೇನೆ, ಕೇಳು :

ವಿಜಯಾರ್ಧದ ಮೇಲೆ ಬಂಧುಗಳನ್ನು ತನ್ನ ಕಲ್ಯಾಣಗುಣಗಳಿಂದ ನಲಿಸುತ್ತ ಪ್ರದ್ಯುಮ್ನನು ಚಂದ್ರನಂತೆ ವರ್ಧಿಸುತ್ತಿದ್ದನು. ಆ ವಿದ್ಯಾಧರಪುತ್ರನು ಬಾಲ್ಯದಲ್ಲೇ ವಿದ್ಯಾಧರೋಚಿತಗಳಾದ ಆಕಾಶಗಾಮಿನಿ ಮುಂತಾದ ವಿದ್ಯೆಗಳನ್ನು ಬೇಗ ಕಲಿತನು. ತನ್ನ ರೂಪಲಾವಣ್ಯಾದಿಗಳಿಂದ ಶತ್ರುಗಳ. ಮಿತ್ರರ ವನಿತೆಯರ ಮನಸೆಳೆಯುತ್ತಿದ್ದನು. ಯೌವನಸ್ಥನಾಗುತ್ತಲೂ ಸರ್ವಾಸ್ತ್ರಕೌಶಲವನ್ನು ಗಳಿಸಿದನು. ತನ್ನ ಸೌಂದರ್ಯದಿಂದ



ಅನ್ಯಯುವಕರು ಅಸೂಯೆ ಪಡುತ್ತಿದ್ದರು. ಮನ್ಮಥ, ಮದನ, ಕಾಮದೇವ, ಮನೋಭವ ಮೊದಲಾದ ಅನ್ವರ್ಥನಾಮಗಳನ್ನು ಪಡೆದಿದ್ದನು. ಅವನು ದಿಟವಾಗಿ ಅನಂಗನಲ್ಲದಿದ್ದರೂ ಅನಂಗನೆನ್ನುತ್ತಿದ್ದರು. ಯುದ್ಧದಲ್ಲಿ ಕಾಲಸಂವರನ ಐನೂರ್ವರು ಪುತ್ರರನ್ನು ಸೋಲಿಸಿ ಕಳಿಸಿದ್ದ ಸಿಂಹರಥನೊಡನೆ ಪ್ರದ್ಯುಮ್ನನು ತಾನು ಕಾದಾಡಿ, ಸಿಂಹರಥನನ್ನು ಗೆದ್ದು ಹಿಡಿದುತಂದು ಕಾಲಸಂವರನಿಗೆ ತೋರಿಸಿದನು. ಇಂಥ ವೀರಪುತ್ರನ ಬಗ್ಗೆ ಅವನಿಗೆ ಸಂತೋಷವಾಯಿತು. ವಿಜಯಾರ್ಧದ ಶ್ರೇಣಿದ್ವಯಗಳೇ ತನ್ನ ವಶವಾದವೆಂದು ಆತನು ಭಾವಿಸಿದನು. ಇದರಿಂದ ಪ್ರಭಾವಿತನಾಗಿ ಪ್ರದ್ಯುಮ್ನನಿಗೆ ಯುವರಾಜಪಟ್ಟ ಕಟ್ಟಿದನು. ಇದರಿಂದ ಕಾಲಸಂವರನ ಬೇರೆ ಐನೂರ್ವರು ಪುತ್ರರು ಎಲ್ಲಾ ರೀತಿಯಿಂದ ಪ್ರದ್ಯುಮ್ನನ ನಾಶಕ್ಕೆ ಉಪಾಯಗಳನ್ನು ಚಿಂತಿಸತೊಡಗಿದರು. ನಿರಂತರವಾಗಿ ಉಪಾಯಾಂತರವನ್ನು ಹುಡುಕುತ್ತಲೇ ಇದ್ದರು. ಆಸನ ಶಯನ ವಸ್ತ್ರ ತಾಂಬೂಲ ಅನ್ನಪಾನಗಳಲ್ಲಿ ಅವನನ್ನು ವಂಚಿಸಲು ಆ ವಂಚನಾತತ್ಪರರಿಗೆ ಎಷ್ಟುಮಾತ್ರವೂ ಸಾಧ್ಯವಾಗಲಿಲ್ಲ.

ಒಂದು ದಿನ ಕುಮಾರರೆಲ್ಲ ಸೇರಿ ಪ್ರದ್ಯುಮ್ನನನ್ನು ಸಿದ್ಧಾಯತನದ ಗೋಪುರದ ಬಳಿಗೆ ಕರೆದೊಯ್ದರು. "ಯಾವಾತನು ಈ ಗೋಪುರದ ತುದಿಗೇರುತ್ತಾನೋ, ಅವನಿಗೆ ಅಲ್ಲಿ ವಾಸಿಸುವ ದೇವನಿಂದ ವಿದ್ಯಾಕೋಶವೂ ಕಿರೀಟವೂ ಲಭ್ಯವಾಗುತ್ತವೆ'' ಎಂದು ಪ್ರೇರಿಸತೊಡಗಿದರು. ಹೀಗೆ ಸಂಗಡಿಗರು ಪ್ರೇರಿಸಲಾಗಿ, ಪ್ರದ್ಯುಮ್ನನು ಕೂಡಲೇ ಆ ಗೋಪುರದ ತುದಿಗೇರಿ ಅಲ್ಲಿ ವಾಸಿಸುತ್ತಿದ್ದ ದೇವನಿಂದ ವಿದ್ಯಾಕೋಶವನ್ನೂ ಕಿರೀಟವನ್ನೂ ತೆಗೆದುಕೊಂಡೇ ಬಂದನು. ಆ ಮೇಲೆ ಆ ಸೋದರರಿಂದ ಮತ್ತೆ ಪ್ರೇರಿತನಾಗಿ ಮಹಾಕಾಲಗುಹೆ ಹೊಕ್ಕು ಅಲ್ಲಿಂದ ಕತ್ತಿಗುರಾಣಿಗಳು ಛತ್ರಚಾಮರಗಳು ಇವನ್ನು ತಂದನು. ಅಲ್ಲಿಂದ ಹೊರಬಿದ್ದು ನಾಗಗುಹೆಗೆ ಹೋಗಿ ಅಲ್ಲಿಯ ದೇವನಿಂದ ಪಾದಪೀಠ, ನಾಗಶಯ್ಯೆ, ಆಸನ, ವೀಣೆ, ಪ್ರಾಸಾದಕಾರಿಣೀವಿದ್ಯೆ ಇವನ್ನು ತಂದನು. ಅಲ್ಲಿಂದ ಬಂದು ಯಾವುದೋ ವಾಪಿಕೆಗೆ ಹೋಗಿ ಯುದ್ಧದಲ್ಲಿ ಸುರರಿಂದ ಜಯಿಸಲ್ಪಟ್ಟ ಉತ್ತುಂಗಮಕರಧ್ವಜವನ್ನು ತಂದನು. ಆಮೇಲೆ ಅಗ್ನಿಕುಂಡವನ್ನು ಹೊಕ್ಕು ಅಲ್ಲಿಂದ ಅಗ್ನಿಸಂಶುದ್ಧಿಯಾದ ವಸ್ತ್ರಯುಗ್ಮವನ್ನು ತಂದನು. ಆಮೇಲೆ ಮೇಷಾಕೃತಿಗಿರಿಯನ್ನು ಪ್ರವೇಶಿಸಿ ಕರ್ಣಕುಂಡಲದ್ವಯವನ್ನು ತಂದನು. ಆಮೇಲೆ ಪಾಂಡುಕವನವನ್ನು ಹೊಕ್ಕು ಅಲ್ಲಿಯ ಮರ್ಕಟನೆಂಬ ದೇವನಿಂದ ಮೌಲಿಯನ್ನೂ ಅಮೃತಮಾಲೆಯನ್ನೂ ತಂದನು. ಕಪಿತ್ಥವನಕ್ಕೆ ಹೋಗಿ ಅಲ್ಲಿಯ ದೇವತೆಯಿಂದ ವಿದ್ಯಾಕರಿಯನ್ನು ತಂದನು. ವಲ್ಮೀಕವನಕ್ಕೆ ಹೋಗಿ ಅಲ್ಲಿಯ ದೇವನಿಂದ ಕ್ಷುರಿಕಾ ಕವಚ ಮುದ್ರಿಕೆ ಮುಂತಾದುವನ್ನು ತಂದನು. ಶರಾವಪರ್ವತಕ್ಕೆ ಹೋಗಿ ಅಲ್ಲಿಂದ ಕಟಿಸೂತ್ರ ಉರಶ್ಛದ ಕಟಕ ಕೇಯೂರ ಕಂಠಿಕೆ ಈ ಭೂಷಣಗಳನ್ನು ತಂದನು. ಶೂಕರವನದಲ್ಲಿ ಶೂಕರದೇವನಿಂದ ಶಂಖ ಧನುಸ್ಸುಗಳನ್ನೂ, ಅಲ್ಲಿಯೇ ಕೀಲಿಸಲ್ಪಟ್ಟ ಮನೋವೇಗನಿಂದ ಹಾರವನ್ನೂ ಸುರೇಂದ್ರಜಾಲವನ್ನೂ ಪಡೆದುಬಂದನು. ಮನೋವೇಗನ ವೈರಿ ವಸಂತನೆಂಬ ವಿದ್ಯಾಧರ. ಪ್ರದ್ಯು